International Journal of Kannada Research 2024; 10(2): 107-110




International Journal of Kannada Research
www.kannadajournal.com

**ISSN: 2454–5813**
IJKR 2024; 10(2): 107-110
© 2024 IJKR
www.kannadajournal.com
Received: 03-02-2024
Accepted: 06-03-2024

**ಡಾ.ಪ್ರಿಯಾಂಕ ಅರೆಮನೆ**
ಅತಿಥಿ ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಬೆಂಗಳೂರು ನಗರ
ವಿಶ್ವವಿದ್ಯಾಲಯ, ಕರ್ನಾಟಕ,
ಭಾರತ

**Corresponding Author:**
**ಡಾ.ಪ್ರಿಯಾಂಕ ಅರೆಮನೆ**
ಅತಿಥಿ ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಬೆಂಗಳೂರು ನಗರ
ವಿಶ್ವವಿದ್ಯಾಲಯ, ಕರ್ನಾಟಕ,
ಭಾರತ

# ವೈದೇಹಿಯವರ ಕಥನಸಾಹಿತ್ಯದಲ್ಲಿ ಹೆಣ್ಣು: ವಿವಿಧ ಆಯಾಮಗಳು

**ಡಾ.ಪ್ರಿಯಾಂಕ ಅರೆಮನೆ**

**ಪೀಠಿಕೆ**

ಕನ್ನಡದ ಮಹಿಳಾ ಕತೆಗಾರ್ತಿಯರಲ್ಲಿ ವೈದೇಹಿ ಅವರದ್ದು ಬಹುಮುಖ್ಯವಾದ ಹೆಸರು. ಸಣ್ಣಕತೆಗಳ ಮೂಲಕವೇ ಪ್ರಸಿದ್ಧರಾದ ವೈದೇಹಿಯವರ ಕತೆಗಳು ಇಂಗ್ಲೀಷ್ ಸೇರಿದಂತೆ ಹಲವು ಭಾಷೆಗಳಿಗೆ ಅನುವಾದಗೊಂಡಿದೆ. ಸಣ್ಣಕತೆಗಳು, ಕವಿತೆಗಳು, ಮಕ್ಕಳ ನಾಟಕಗಳು, ಜೀವನಚರಿತ್ರೆಯ ಜೊತೆಗೆ ಅವರು ಬರೆದಿರುವ 'ಅಸ್ಪೃಶ್ಯರು' ಎಂಬ ಕಾದಂಬರಿಯು ಕನ್ನಡ ಕಥನಸಾಹಿತ್ಯದಲ್ಲಿ ವೈದೇಹಿಯವರ ಹೆಸರು ಚಿರಸ್ಥಾಯಿಗೊಳಿಸಿದೆ. ವೈದೇಹಿಯವರ ಸಾಹಿತ್ಯದ ಕೇಂದ್ರ ಬಿಂದು ಹೆಣ್ಣು. ಮಹಿಳೆಯರ ಬಗೆಗಿನ ಸಾಂಪ್ರದಾಯಿಕ ನೋಟದ ಬದಲಿಗೆ ಹೆಣ್ಣಿನ ಅಂತರಾಳದ ಒಳತೋಟಿಗಳನ್ನು ಹಲವು ಆಯಾಮಗಳನ್ನು ತಮ್ಮ ಸಾಹಿತ್ಯದಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಹೆಣ್ಣಿಗೆ ದೇಹ ಮಾತ್ರ ಇಲ್ಲ. ಆಕೆಗೊಂದು ಬದುಕಿದೆ, ಮನಸ್ಸಿದೆ, ಆಯ್ಕೆಗಳಿವೆ, ಸ್ವಾತಂತ್ರ್ಯವಿದೆ, ಸಮಾನತೆಯಿದೆ ಎಂಬುದನ್ನು ಮಹಿಳಾ ಪಾತ್ರಗಳ ಮೂಲಕ ಹೃದಯಂಗಮವಾಗಿ ಓದುಗರ ಮನಮುಟ್ಟಿಸಿದ್ದಾರೆ.

ವೈದೇಹಿಯವರ ಕಥನಕ್ರಮದಲ್ಲಿ ಬಂಡಾಯಪ್ರಜ್ಞೆ, ಸ್ತ್ರೀವಾದಿ ಪ್ರಜ್ಞೆ, ಪ್ರಗತಿಪರ ಧೋರಣೆಗಳೊಂದಿಗೆ ಮಹಿಳೆಯರ ಬಗೆಗಿನ ಸಾಂಪ್ರದಾಯಿಕ ನೋಟದ ಬಗೆಗೆ ಅಸಮಾಧಾನವಿದೆ. ಆ ಸಾಂಪ್ರದಾಯಿಕತೆಯನ್ನು ಮೀರುವ, ಮಹಿಳಾ ಬದುಕಿನ ವಿಸ್ತಾರತೆಯನ್ನು ಪ್ರಚುರಪಡಿಸುವ ಪಾತ್ರಗಳು ಕಾಣಸಿಗುತ್ತವೆ. ವೈದೇಹಿಯವರ ಬರಹಗಳ ಕೇಂದ್ರ ಪರಿಸರ ಕುಂದಾಪುರ. ಈ ಹಳ್ಳಿಯ ಪರಿಸರದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ವರ್ಗದ ಮಹಿಳೆಯರ ಚಿತ್ರಣವನ್ನು ಒಳಗೊಂಡಿದೆ. ಇನ್ನೊಂದು ವಿಶಿಷ್ಟತೆಯೆಂದರೆ ಅವರು ಬಳಸಿದ ಭಾಷೆ ಕುಂದಾಪುರದ ಹವ್ಯಕ ಬ್ರಾಹ್ಮಣ ಕನ್ನಡ. ಈ ಆಡುನುಡಿಯು ಓದುಗರನ್ನು ಆಪ್ತವಾಗಿಸಿಕೊಳ್ಳುತ್ತದೆ.

ಕುಟುಂಬ, ಮನೆ, ಸಂಸಾರ, ಗಂಡ, ಮಕ್ಕಳು ಹೀಗೆ ಕೌಟುಂಬಿಕ ಚೌಕಟ್ಟಿನೊಳಗೆ ಬಂದಿಯಾಗುವ ಬಹುದೊಡ್ಡ ಮಹಿಳಾವರ್ಗ ವೈದೇಹಿಯವರ ಸಾಹಿತ್ಯದಲ್ಲಿ ಕಾಣಬಹುದು. ಕೌಟುಂಬಿಕ ಬದುಕಿನಿಂದ ಹೊರಬರಲಾರದ, ಒಳಗು ಇರಲಾರದೆ ತೊಳಲಾಡುವ ಮಹಿಳೆಯರು ತಮ್ಮ ದುರಂತಕ್ಕೆ ತಾವೇ ಮರುಗುವ ಚಿತ್ರಣವಿದೆ. 'ಸಂ–ಸಾರ' ಕತೆಯ ರಂಗೂ, 'ವರ್ತುಲ' ಕತೆಯ ಕುಸುಮಾ, 'ಅಸ್ಪೃಶ್ಯರು' ಕಾದಂಬರಿಯ ಗೌರಮ್ಮ ಇವರುಗಳು ಕುಟುಂಬವನ್ನು ನಿರಾಕರಿಸಿ ನಿಲ್ಲದೇ ಬದುಕು ಮತ್ತು ಕುಟುಂಬವನ್ನು ಒಂದೇ ಎಂದು ಭಾವಿಸಿದವರು. 'ಸಂಸಾರಿ ಪದ' ಕವಿತೆಯಲ್ಲಿ ಅಕ್ಕಮಹಾದೇವಿಯ ಕುಟುಂಬ ವೈರಾಗ್ಯವನ್ನು ನೆನೆದು ತಮಗೆ ಹಾಗೇ ಇರಲಾರದೆ ಗಾಣದ ಎತ್ತಿನಂತೆ ನಿರಂತರವಾಗಿ ದುಡಿಯಬೇಕಾದ ಕುರಿತು ಮಹಿಳೆಯರ ಹತಾಶೆಯಿದೆ. ಇವುಗಳು ದೈನಂದಿನ ಬದುಕಿನ ಮಹಿಳೆಯರ ಬಿಡುವಿಲ್ಲದ ಕೈಂಕರ್ಯಗಳು, ಸಂಸಾರದಿಂದ ದೂರ ಹೋಗೋಣ ಎನಿಸಿದರೂ ಇರುವ ಪರಿಸ್ಥಿತಿಯಲ್ಲಿಯೇ ಹೊಂದಿಕೊಂಡು ಬದುಕಬೇಕಾದ ಅನಿವಾರ್ಯತೆಯನ್ನು ಧ್ವನಿಸುತ್ತವೆ. 'ಅಡುಗೆ ಮನೆ ಹುಡುಗಿ' ಕವಿತೆಯ ವಸ್ತು ಇದೇ ಬಗೆಯದ್ದಾದರೂ ಆ ಹೆಣ್ಣುಮಗಳು ತನ್ನ ಬದುಕು ಬದಲಾಗಬಹುದು, ಬದಲಾಗಲಿ ಎಂಬ ಕನಸು ಹೊತ್ತು ಕಾಯುತ್ತಿದ್ದಾಳೆ.

'ಅವಳ ಅಡುಗೆ ಮನೆ
ಯಾರ ಸಿದ್ಧಾಂತ ಪಾಕವೋ
ಬಾಗಿಲಿಲ್ಲ, ಕಿಟಕಿಯಿಲ್ಲ.
ಹೊಗೆನಳಿಕೆಯೂ ಇಲ್ಲ.

ಕೊನೆಗೊಂದು ಕಿರುಕಿಂಡಿಯಾದರೂ
ಹಂಬಲಿಸುತ್ತಾಳೆ’[೧]

ಅಡುಗೆ ಮನೆ ಎಂಬುದು ಕೌಟುಂಬಿಕ ಬದುಕಿನೊಳಗೆ ಬಂಧಿಯಾದ ಹೆಣ್ಣನ್ನು ಹಲವು ಆಯಾಮಗಳಲ್ಲಿ ಕಟ್ಟಿಕೊಡುವ ಸಮರ್ಥ ರೂಪಕ. ನಾಲ್ಕು ಗೋಡೆಗಳ ನಡುವಿನ ಬದುಕಿನಿಂದ, ಸಣ್ಣ ಕಿಂಡಿಯೂ ಇರದ ಅಡುಗೆ ಮನೆಯೆಂಬ ಕಾರಾಗೃಹದಿಂದ ಬಿಡುಗಡೆಗೆ ಕಾತರಿಸುತ್ತಿದ್ದಾಳೆ. ಇದು ಅಡುಗೆ ಕೋಣೆಗೆ ಸೀಮಿತವಾಗಿ ಸಣ್ಣ ಅವಕಾಶಗಳಿಗಾಗಿ ಹಂಬಲಿಸುವ ಎಲ್ಲಾ ಹೆಣ್ಣುಮಕ್ಕಳ ಅಂತರಂಗದ ಒಳತೋಟಿಯಾಗಿದೆ ಎಂಬುದು ಇಲ್ಲಿ ವೇದ್ಯವಾಗುತ್ತದೆ.

ತಾಯ್ತನ ಎನ್ನುವುದು ಬರೀ ಹೆರುವ ಪ್ರಕ್ರಿಯೆ ಮಾತ್ರವಲ್ಲ. ಹೆಣ್ಣಿಗೆ ಪ್ರಕೃತಿದತ್ತವಾಗಿಯೇ ಕಾಪಾಡುವ, ಪೋಷಿಸುವ ಗುಣಗಳಿರುವುದರಿಂದ ತಾಯ್ತನದ ಬಯಕೆಯೂ ಅಂತರ್ಗತವಾಗಿರುತ್ತದೆ. ಇಂತಹ ತಾಯ್ತನ, ಮಗು ಪಡೆಯಬೇಕೆಂಬ ಕನಸು ‘ಅಕ್ಕು’ ಕತೆಯಲ್ಲಿ ಬರುವ ಅಕ್ಕುವಿಗೆ ಸಾಧ್ಯವಾಗುವುದಿಲ್ಲ. ಮದುವೆಯಾದ ಹೊಸತರಲ್ಲೆ ಸನ್ಯಾಸಿಯ ಹಿಂದೆ ಹೋದ ಗಂಡನಿಂದ ದೈಹಿಕ ಸುಖವನ್ನು ಕಳೆದುಕೊಳ್ಳುವುದರೊಂದಿಗೆ, ಆಕೆಯ ತಾಯ್ತನದ ಕನಸು ಕಮರಿಹೋಗುತ್ತದೆ. ಇದರಿಂದ ತನ್ನನ್ನು ಸದಾ ಬಸುರಿ, ಬಾಣಂತಿ, ಮಗು ಕೈಯಲ್ಲಿದೆ ಎಂದು ಭ್ರಮಿಸುವ ಅಕ್ಕು ಲೋಕದ ಜನರ ಪಾಲಿಗೆ ಮಾನಸಿಕ ಅಸ್ವಸ್ಥಳಾಗುತ್ತಾಳೆ. ಪತ್ನಿಯ ಸಂಕಷ್ಟದಲ್ಲಿ ಪ್ರತಿಸಂದಿಸಿದ ಪಾಂಡವರನ್ನು ದ್ರೌಪದಿ ‘ಗಂಡರ್ಯೆವರು ಮೂರು ಲೋಕದ ಗಂಡರೊಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ’ ಎಂದು ಮೂದಲಿಸುವಳು. ಅದರಂತೆ ಇಲ್ಲಿ ಅಕ್ಕು ಊರಿನ ಪುರುಷರೆಲ್ಲಾ ಷಂಡರು ಎಂದು ಹಂಗಿಸುತ್ತಾಳೆ. ಮರಳಿ ಬಂದ ಗಂಡನನ್ನು ‘ಇನ್ನ್ ಇವ್ನೊಟ್ಟಿಗೆ ಹ್ವೋಪ್ದ! ನನ್ ಹ್ಯೆಣ ಸಮೀಪ ಹೋಗ’ ಎಂದು ತಿರಸ್ಕರಿಸುವಳು. ತನ್ನನ್ನು ನಿರಾಕರಿಸಿದವನು ನನಗೂ ಬೇಡ ಎಂಬ ಸ್ವಾಭಿಮಾನದ ಸಿಟ್ಟನ್ನು ಇಲ್ಲಿ ಕಾಣಬಹುದು.

ಒಂದು ಹೆಣ್ಣಿನ ಜೀವನದಲ್ಲಿ ಮುಖ್ಯವಾಗಿ ಕುಟುಂಬ, ಗಂಡ, ಮಕ್ಕಳು, ಸಮಾಜವೂ ಬಹಳ ಮುಖ್ಯವಾಗಿರುತ್ತದೆ. ಆದರೆ ಇಲ್ಲಿ ಅಕ್ಕುವಿಗೆ ಕುಟುಂಬದ ಬೆಂಬಲವೂ ಸಿಗದೇ ಕುಟುಂಬದವರಿಂದಲೇ ಹುಚ್ಚಿ ಎನ್ನುವ ಸಲುವಾಗಿ ಹಲ್ಲೆಗೊಳಗಾಗುತ್ತಾಳೆ. ಅಕ್ಕುವನ್ನು ಇಲ್ಲಿ ಕುಟುಂಬದಲ್ಲಿ ಮಾತ್ರವಲ್ಲದೆ ಇಡೀ ಊರಿನ ಜನತೆ ಹುಚ್ಚಿಯ ಪಟ್ಟವನ್ನು ಕಟ್ಟಿದರು. ಮಕ್ಕಳಾದಿಯಾಗಿ ಪ್ರತಿಯೊಬ್ಬರು ಅವಳಿಗೆ ಹುಚ್ಚಿ ಎಂದು ಅವಳನ್ನು ರೇಗಿಸಿ ಅವಳು ಆಡುತ್ತಿದ್ದ ಮಾತುಗಳನ್ನು ಕೇಳಿ ನಗುತ್ತಿದ್ದರು. ಇಲ್ಲಿ ಅವಳನ್ನು ಕೇವಲ ಮನರಂಜನೆಯ ವಸ್ತುವಾಗಿ ನೋಡುತ್ತಿದರು. ಮಾನಸಿಕವಾಗಿ ಅಸ್ವಸ್ಥಳಾದ ಹೆಣ್ಣಿನ ನೋವಿಗೆ ಮತ್ತು ಅವಳ ಭಾವನೆಗಳಿಗೆ ಯಾರು ಸ್ಪಂದಿಸುವುದು ಇಲ್ಲ. ಒಬ್ಬ ಸಾಧಾರಣವಾದ ಹೆಣ್ಣಾಗಲೀ ಅಥವಾ ಮಾನಸಿಕವಾಗಿ ಅಸ್ವಸ್ಥಳಾದ ಹೆಣ್ಣಾಗಲಿ ಅವಳಿಗೆ ಮತ್ತು ಅವಳ ಭಾವನೆಗಳಿಗೆ, ನೋವಿಗೆ ಸ್ಪಂದಿಸುವ ಒಂದು ಹೃದಯ ಇರಬೇಕಾಗುತ್ತದೆ. ಇದ್ಯಾವುದನ್ನು ಕಾಣದ ಅಕ್ಕು ಕುಟುಂಬವನ್ನು ತೊರೆಯಲೂ ಆಗದೇ ಕುಟುಂಬದಲ್ಲಿ ಇರಲೂ ಆಗದ ಅಸಹಾಯಕ ಹೆಣ್ಣುಮಗಳಾಗಿ ಕಂಡುಬರುತ್ತಾಳೆ.

‘ಶಕುಂತಲೆಯೊಂದಿಗೆ ಕಳೆದ ಅಪರಾಹ್ನ’ ಕತೆಯಲ್ಲೂ ಇದೇ ಬಗೆಯ ನಿರಾಕರಣೆಯಿದೆ. ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು’ ಎನ್ನುವ ಮೂಲಕ ದುಶ್ಯಂತನಿಲ್ಲದೇ ಬದುಕಬಲ್ಲೆ. ತಾಯಿಯಾಗಿ ಮಗ ಭರತನನ್ನು ಸಾಕಬಲ್ಲೆ ಎಂದು ಶಕುಂತಳೆಯೂ ತನ್ನ ಆತ್ಮಗೌರವವನ್ನು ಅಭಿವ್ಯಕ್ತಿಸುತ್ತಾಳೆ. ‘ಮರ–ಗಿಡ–ಬಳ್ಳಿ’ ಕತೆಯಲ್ಲಿ ತಾಯ್ತನದ ಇನ್ನೊಂದು ಮುಖವಿದೆ. ತಾಯ್ತನದಿಂದ ಪೊರೆದ ಮಕ್ಕಳು ಇಳಿವಯಸ್ಸಿನಲ್ಲಿ ತಾಯಿಯನ್ನು ಪರೋಕ್ಷವಾಗಿ ತಿರಸ್ಕರಿಸಿ, ಆಕೆಯ ಸಾವನ್ನು ಎದುರು ನೋಡುವರು. ಇದರಿಂದ ಆ ತಾಯಿ ನಂಬಿಕೊಂಡು ಬಂದಿದ್ದ ತಾಯ್ತನದ ಮೌಲ್ಯಗಳು ಬುಡಮೇಲಾಗುತ್ತವೆ. ಆ ಮೂಲಕ ಸಂಬಂಧಗಳಲ್ಲಿ ಮೌಲ್ಯಗಳು ಮರೆಯಾಗುವಿಕೆ, ವ್ಯಾವಹರಿಕವಾದ ಕೃತಕ ತಾಯಿ ಮಗುವಿನ ಸಂಬಂಧವನ್ನು ಚಿತ್ರಿಸುವ ಮೂಲಕ ಲೇಖಕಿ ತಾಯ್ತನದ ಸುತ್ತಲ ನಂಬಿಕೆಗಳು ಕಳಚಿಕೊಳ್ಳುತ್ತಿರುವುದನ್ನು ಮನಗಾಣಿಸುತ್ತಾರೆ.

‘ಅಮ್ಮಚ್ಚಿ ಎಂಬ ನೆನಪು’ ಕತೆಯಲ್ಲಿ ಹೆಣ್ಣನ್ನು ಸಾಂಪ್ರದಾಯಿಕ ನೆಲೆಯಲ್ಲಿ ಬಂಧಿಸಲು ಹೊರಟಂತಹ ಪುರುಷ ಮನಸ್ಥಿತಿಗೆ ಅಮ್ಮಚ್ಚಿ ಬಲಿಪಶುವಾಗುವ ಚಿತ್ರಣವಿದೆ. ಅಮ್ಮಚ್ಚಿಯ ಸಂಬಂಧಿಕನೇ ಆದ ವೆಂಕಪ್ಪಯ್ಯ ಆಕೆಯ ಇಚ್ಚೆಗೆ ವಿರುದ್ದವಾಗಿ ಅವಳನ್ನು ಮದುವೆಯಾಗುವ ಹಂಬಲ ಹೊಂದಿದವನು. ಇದರಿಂದ ಅವಳ ಮಾತು, ಪ್ರಶ್ನಿಸುವ ಮನೋಭಾವ ಹತ್ತಿಕ್ಕುವ ವೆಂಕಪ್ಪಯ್ಯ ಅವಳ ಉಡುಗೆ ತೊಡುಗೆಯೂ ತಾನು ಹೇಳಿದಂತೆ ಇರಬೇಕು ಬಯಸುವವ. ಆಕೆಯ ಇಚ್ಚೆಯಂತೆ ಆಧುನಿಕ ಶೈಲಿಯಲ್ಲಿ ಹೊಲಿಸಿದ ರವಿಕೆಯನ್ನು ಕಂಡು ತನಗೆ ವಿರುದ್ದವಾಗಿ ನಡೆದುಕೊಂಡ ಅಮ್ಮಚ್ಚಿಯನ್ನು ಬಲತ್ಕರಿಸುವ ಮೂಲಕ ಮಾನ ಹಾನಿ ಮಾಡಿ ಮದುವೆಯಾಗುವನು. ಅಂತಹ ಬಲತ್ಕಾರದ ಮದುವೆ ಸುಖಾಂತ್ಯ ಕಾಣದೇ ವೆಂಕಪ್ಪಯ್ಯನ ಸಾವಿನೊಂದಿಗೆ ಅಮ್ಮಚ್ಚಿಯ ಬಂಧನದ ಬದುಕಿಗೆ ಮುಕ್ತಿ ದೊರೆಯುವುದು.

ಈ ಕತೆಯಲ್ಲಿ ಅಮ್ಮಚ್ಚಿ ಮಾತ್ರ ಪುರುಷಪ್ರಧಾನ ಸಮಾಜ, ಕುಟುಂಬವ್ಯವಸ್ಥೆ ಮತ್ತು ಪುರುಷಪ್ರಧಾನ ಮನಸ್ಥಿತಿಯಿಂದ ಶೋಷಣೆಗೆ ಒಳಗಾದವಳಲ್ಲ. ಕತೆಯಲ್ಲಿನ ನಾಲ್ಕು ತಲೆಮಾರಿನ ಹೆಣ್ಣುಮಕ್ಕಳು ಈ ಬಗೆಯ ಶೋಷಣೆಗೆ ಒಳಗಾದ ಚಿತ್ರಣವಿದೆ. ಈ ಕತೆಯಲ್ಲಿ ಬರುವ ಪುಟ್ಟಮತ್ತೆಯ ತಾಯಿಯ ಬಗ್ಗೆ ನೋಡುವುದಾದರೆ, ಪುಟ್ಟಮತ್ತೆಯ ತಾಯಿ ಗಂಡನಿಗೆ ಸ್ನಾನಕ್ಕೆ ಬಿಸಿನೀರು ಕಾಯಿಸಿ ಕೊಡಲಿಲ್ಲ ಎಂಬ ಒಂದೇ ಕಾರಣಕ್ಕೆ ಆಕೆಯನ್ನು ಗಂಡನೇ ಬಾವಿಗೆ ತಳ್ಳಿ ಸಾಯಿಸುವನು. ಇದು ಒಂದು ತಲೆಮಾರಿನ ದುರಂತ ಅಂತ್ಯದ ಕತೆಯಾಗಿದೆ. ಅನಂತರದಲ್ಲಿ ಇದೇ ಸಮಾಜದ ಪುರುಷ ಮನಸ್ಥಿತಿಗಳಿಂದ ಪುಟ್ಟಮತ್ತೆ ಯೌವ್ವನಕ್ಕೆ ಬಂದಾಗ ಆಕೆಯ ಮೇಲೆ ಬಲತ್ಕಾರದಂತಹ ಪ್ರಯತ್ನ ನಡೆಯುತ್ತದೆ. ಇದು ಇನ್ನೊಂದು ಬಗೆಯ ಶೋಷಣೆಯಾಗಿದೆ. ಮುಂದೆ ಪುಟ್ಟಮತ್ತೆಯ ಮದುವೆಯಾದರೂ ಆಕೆ ತನ್ನ ಗಂಡನಿಂದನೂ ಶೋಷಣೆಗೆ ಒಳಗಾಗುವಳು. ಆದರೆ ಗಂಡನ ಅಕಾಲಿಕ ಮರಣದಿಂದ ವಿಧವೆಯ ಪಟ್ಟ ದೊರೆತು ಸಮಾಜದ ಹಂಗಿಸುವಿಕೆಗೆ ಒಳಗಾಗುವಳು. ಇನ್ನು ಮುಂದಿನ ತಲೆಮಾರಿನಲ್ಲಿ ಪುಟ್ಟಮತ್ತೆಯ ಮಗಳು ಗಂಡನ ದುರಂಹಕಾರಿ ವರ್ತನೆಯಿಂದ ಶೋಷಿತಳಾಗಿದ್ದು, ದುರದೃಷ್ಟಾವಶಾತ್ ಅಮ್ಮಚ್ಚಿಯನ್ನು ಹೆತ್ತ ನಂತರ ಹೆರಿಗೆ ಸಮಯದಲ್ಲಿ ಆಕೆ ಮರಣ ಹೊಂದುವಳು. ಈ ಸಂದರ್ಭದಲ್ಲಿ ಗಂಡನೆನೆಸಿಕೊಂಡವನು ಹೆಂಡತಿ ಮರಣ ಹೊಂದಿದ್ದಾಳೆ ಮಗು ಅನಾಥವಾಗಿದೆ ಎಂದು ನೋಡದೇ, ಹೆಣ್ಣು ಮಗು ಎಂದ ಕೂಡಲೇ ತಿರಸ್ಕರಿಸಿ ಹೊರಟು ಹೋಗುವನು. ಹೀಗೆ ಬಾಲ್ಯದಿಂದಲೇ ತಂದೆಯ ಅವಜ್ಞೆಗೆ ಒಳಗಾಗಿದ್ದ ಅಮ್ಮಚ್ಚಿಯು ಮುಂದೆ ತಾನು ಕನಸು ಕಟ್ಟಿದ್ದ ಶಂಭಟ್ಟರ ಮಗನ

[1] ವೈದೇಹಿ., ಬಿಂದು ಬಿಂದಿಗೆ ಪು. ಸಂ. ೩೩

ಆಸೆಯೂ ಬಿಟ್ಟು ವೆಂಕಪ್ಪಯ್ಯನ ಕೈಗೆ ಸಿಕ್ಕು ನಲುಗುವಂತಾಗುವುದನ್ನು ನೋಡಬಹುದು.

ಪುರುಷಪ್ರಧಾನ ವ್ಯವಸ್ಥೆಯ ಬೇರುಗಳು ನಮ್ಮ ಸಮಾಜದಲ್ಲಿ ಎಷ್ಟು ಆಳವಾಗಿ ಬೇರೂರಿವೆ ಎಂದರೆ ಆ ಮನಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವವರು ಕೇವಲ ಪುರುಷರಲ್ಲ. ಅಧಿಕಾರ ಸ್ಥಾನದಲ್ಲಿರುವ ಹೆಣ್ಣುಮಕ್ಕಳು ಕೂಡ ಸಂಪ್ರದಾಯ, ಆಚರಣೆ, ನಂಬಿಕೆಗಳು ಎಂಬ ಹೆಸರಿನಲ್ಲಿ ತಾವು ಸಮಾನ ಲಿಂಗದವರು ಎಂಬುದನ್ನು ಮರೆತು ಇನ್ನೊಂದು ಹೆಣ್ಣನ್ನು ಮುಟ್ಟು, ಮೈಲಿಗೆ, ವೈಧವ್ಯ, ವೇಶ್ಯೆ ಎಂಬ ಹೆಸರಿನಲ್ಲಿ ಶೋಷಿಸಬಲ್ಲಳು. 'ಅಮ್ಮಚ್ಚಿ ಎಂಬ ನೆನಪು' ಕತೆಯಲ್ಲಿ ದೊಡ್ಡಪಯ್ಯನ ಹಿರಿಯ ಸೊಸೆಯು ಪುಟ್ಟಮತ್ತೆಗೆ 'ಮುಂಡೇಯರಿಗೆಲ್ಲ ಯಾಕೆ ಶೋಕಿ ತಲೆಯನ್ನು ಬೋಳಿಸಿಕೊಳ್ಳದೆ' ಎಂದು ಅನೇಕ ಬಾರಿ ಅವಹೇಳನ ಮಾತುಗಳನ್ನು ಆಡಿದ್ದರು. 'ಅಸ್ಪೃಶ್ಯರು' ಕಾದಂಬರಿಯ ಪಾರ್ತಕ್ಕ ಮತ್ತು ಗೌರಮ್ಮ ಇದೇ ಬಗೆಯ ಮನೋಭಾವದವರು. ವೈಧವ್ಯವನ್ನು ಕಟ್ಟುನಿಟ್ಟಾಗಿ ಆಚರಿಸಬೇಕೆಂದು ಬೋಧಿಸುವರು. ಇನ್ನು ಈ ಕಾದಂಬರಿಯಲ್ಲಿ ಪಾರ್ತಕ್ಕ ಮಗಳನ್ನು ಹಿಡಿತದಲ್ಲಿರಿಸಿಕೊಂಡ ಅಳಿಯನ ಬುದ್ಧಿ ಕಂಡು ಹೆಮ್ಮೆಪಡುವಳು. ಆ ಮೂಲಕ ಪುರುಷಾಧಿಕಾರವನ್ನು ಬೆಂಬಲಿಸುವುದನ್ನು ನೋಡಬಹುದು. 'ಅಕ್ಕು' ಕತೆಯಲ್ಲಿನ ಅಕ್ಕುವಿಗೆ ಆಕೆಯ ಚಿಕ್ಕಪ್ಪ ದನ ಬಡಿದಂತೆ ಬಡಿಯುತ್ತಿರುವಾಗ ಅಲ್ಲಿದ್ದ ಹೆಣ್ಣುಮಕ್ಕಳು 'ಹಾಕು ನಾಕ್, ಇನ್ನು ಹಾಕ್, ಸತ್ರೆ ಸತ್ತತ್ ಮರ್ರುಕವಮ್ಮಾ ಯಾರಿಲ್ಲ' ಎನ್ನುವರು. ಅಕ್ಕುವಿನ ಸಂಕಷ್ಟಕ್ಕೆ ಪ್ರತಿಸ್ಪಂದಿಸಬೇಕಾಗಿದ್ದ ಹೆಣ್ಣುಮಕ್ಕಳ ಈ ಬಗೆಯ ಮಾತುಗಳು ಪುರುಷಪ್ರಧಾನ ವ್ಯವಸ್ಥೆಯ ಪ್ರತಿರೂಪದಂತಿವೆ ಎಂಬುದು ಭಾಸವಾಗುತ್ತದೆ.

ವೈದೇಹಿಯವರ ಕಥಾಸಾಹಿತ್ಯದಲ್ಲಿ ಕನ್ಯಾನ್ವೇಷಣೆಯ ಸಂದರ್ಭದಲ್ಲಿ ಹೆಣ್ಣನ್ನು ವ್ಯಾಪಾರಕ್ಕಿಟ್ಟ ವಸ್ತುವಂತೆ ನೋಡುವ ಕ್ರಮವನ್ನು ಅಲ್ಲಿನ ಹೆಣ್ಣುಪಾತ್ರಗಳು ವಿರೋಧಿಸುವ ಸಂದರ್ಭಗಳಿವೆ. ವಿವಾಹ ಎಂಬುದು ಬಂಧನವಾಗುವ ಮೊದಲು ವಿವಾಹದ ಕುರಿತು ಹೆಣ್ಣುಮಕ್ಕಳಲ್ಲಿ ನೂರಾರು ಕನಸುಗಳಿರುತ್ತವೆ. ಅಂತಹ ಕನಸು ಕಟ್ಟಿಕೊಂಡ 'ಅಲೆಗಳಲ್ಲಿ ಅಂತರಂಗ' ಕತೆಯ ನಾಯಕಿ ಅಚಲ ತನ್ನನ್ನು ನೋಡಲು ಬಂದ ಗಂಡು ಇಷ್ಟವಾಗದಿದ್ದಾಗ ಕುಟುಂಬದ ಚೌಕಟ್ಟನ್ನು ಮೀರಿ ಆತನನ್ನು ತಿರಸ್ಕರಿಸುವಳು. 'ಬೀಳು ಬೇರು' ಕತೆಯ ನಾಯಕಿ ಇಂದಿಯೂ ಹೆಣ್ಣು ನೋಡುವ ಶಾಸ್ತ್ರದಲ್ಲಿ ಗಂಡಿನ ಮುಂದೆ ತಲೆತಗ್ಗಿಸಿ ಕೂರಬೇಕಾದುದರ ಕುರಿತು ಅಸಮಧಾನ ವ್ಯಕ್ತಪಡಿಸುವಳು. 'ಇಸ್ಸಿ, ನಾನು ಇನ್ನು ಮೇಲೆ ಹಾಗೆ ಕೂಡುವುದಿಲ್ಲ. ನಾನೇನು ವಸ್ತುವಲ್ಲ, ಪ್ರಾಣಿಯಲ್ಲ' ಎಂದು ಹೇಳುವ ಆಕೆಯ ಮಾತುಗಳಲ್ಲಿ ಹೆಣ್ಣಿಗೂ ಆಯ್ಕೆ ಸ್ವಾತಂತ್ರ್ಯವಿದೆ, ಸ್ವಾಭಿಮಾನವಿದೆ ಎಂಬ ಅರಿವು ಇರುವುದು ಸ್ಪಷ್ಟವಾಗುತ್ತದೆ. 'ಅಸ್ಪೃಶ್ಯರು' ಕಾದಂಬರಿಯ ನಾಯಕಿಯು ವಿವಾಹದ ಕುರಿತು ತನ್ನದೇ ಆದ ಧೋರಣೆಗಳನ್ನು ಹೊಂದಿದ್ದರೂ, ಮದುವೆ ಆಗಬಯಸಿದ ಗಂಡು ಜಾತಿ–ಧರ್ಮ–ದೇವರು ಈ ಬಗೆಯ ಸಂಕೋಲೆಗಳನ್ನು ಮೀರಿದವನಾಗಿರಬೇಕು ಎಂದು ಬಯಸುತ್ತಾಳೆ 'ಆತ ಯಾವ ಜಾತಿಯವನೇ ಆಗಿರಲಿ, ತಾನು ಆಗುವವಳೇ' ಎನ್ನುವಳು. ಆ ಮೂಲಕ ವಿವಾಹಕ್ಕೆ ಜಾತಿ, ಅಂತಸ್ತು ಮುಖ್ಯವಲ್ಲ ಮಾನವೀಯ ಮೌಲ್ಯಗಳು ಮುಖ್ಯವಾಗುತ್ತವೆ ಎಂಬ ವೈಚಾರಿಕ ಪ್ರಜ್ಞೆ ಸರೋಜಳಲ್ಲಿರುವುದು ಮನಗಾಣಬಹುದು. ತಾವು ಏನೂ ಮಾಡಿದರೂ, ಹೇಗೆ ನಡೆದುಕೊಂಡರೂ ಹೆಣ್ಣಾದವಳು ಸಹಿಸಿಕೊಂಡು ಬಾಳಬೇಕು ಎಂಬ ಪುರುಷಪ್ರಧಾನ ಮನಸ್ಥಿತಿಗೆ ತಲೆಬಾಗದೇ ಅದನ್ನು ತೊರೆದು ಹೋಗಿ ಸ್ವತಂತ್ರ ಜೀವನ ಕಂಡುಕೊಳ್ಳುವ ಮಹಿಳಾ ಪಾತ್ರಗಳನ್ನು ವೈದೇಹಿಯವರ ಸಾಹಿತ್ಯದಲ್ಲಿ ನೋಡಬಹುದು.

ವೈದೇಹಿಯವರ ಕಥನಗಳಲ್ಲಿ ಆರ್ಥಿಕ ಸಬಲರಾದ ಮಹಿಳೆಯರ ಚಿತ್ರಣ ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುವುದಿಲ್ಲ. ಇಲ್ಲಿನ ಮಹಿಳೆಯರು ಆರ್ಥಿಕವಾಗಿಯೂ ಕೂಡ ಸ್ವತಂತ್ರರಲ್ಲ. ಕೌಟುಂಬಿಕ ಚೌಕಟ್ಟಿನೊಳಗೆ ಇರುವ ಹೆಣ್ಣುಮಕ್ಕಳಿಗೆ ದೊಡ್ಡಮಟ್ಟದ ಹಣ ಬೇಕಿಲ್ಲ. ಆದರೆ ತಮ್ಮ ಸಣ್ಣ ಪುಟ್ಟ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಪುರುಷರ ಬಳಿ ಹಣ ಕೇಳಬೇಕಾದ ಪರಿಸ್ಥಿತಿಯಿದೆ. 'ಮದುವೆ– ಹೆಣ್ಣು–ಸೀರೆ' 'ಒಂದು ಕಳ್ಳ ವೃತ್ತಾಂತ' ಈ ಕತೆಗಳಲ್ಲಿ ಆರ್ಥಿಕ ಕೊರತೆಯಿಂದ ಬಂಧುಗಳ ಮದುವೆಗೆ ರೇಶ್ಮೆ ಸೀರೆ ತೆಗೆದುಕೊಳ್ಳಲಾರದೆ ಉಳಿದವರ ಮುಂದೆ ಕೀಳರಿಮೆ ಅನುಭವಿಸುವ ಹೆಣ್ಣುಮಕ್ಕಳ ಚಿತ್ರಣವಿದೆ. 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯ ಮಂಜುನಾಥಯ್ಯನ ಹೆಂಡತಿಯು ಶ್ರೀಮಂತ ಕುಟುಂಬದವಳಾದರೂ ಗಂಡನ ಅಧೀನದಲ್ಲಿರುವಳು. ಸಿನೆಮಾ ನೋಡಲು ಹೋದಾಗ ಹಣವಿಲ್ಲದೆ ಅವಮಾನ ಎದುರಿಸುವಂತಾಗುತ್ತದೆ. ಈ ರೀತಿಯಾಗಿ ಸಣ್ಣ ಪ್ರಮಾಣದ ಹಣವನ್ನು ಹೊಂದಿಸಲಾಗದೆ ಅವಮಾನ, ನೋವು, ಹತಾಶೆಗೆ ಒಳಗಾಗಬೇಕಾದ ದುಸ್ಥಿತಿಯು ಪುರುಷಪ್ರಧಾನ ವ್ಯವಸ್ಥೆಯ ಫಲಶ್ರುತಿಯಾಗಿದೆ.

ವೈದೇಹಿ ಅವರ ಸಾಹಿತ್ಯದಲ್ಲಿ ಈ ಮೊದಲೇ ಚರ್ಚಿಸದಂತೆ ಶಿಕ್ಷಣ ಪಡೆದವರು, ದುಡಿಮೆ ಮಾಡುತ್ತಿರುವವರು, ಆರ್ಥಿಕ ಸಬಲರಾದಂತಹ ಹೆಣ್ಣಿನ ಪಾತ್ರಗಳು ಕಡಿಮೆ. ಶಾಲೆ ಅಥವಾ ಶಿಕ್ಷಣದ ಗಂಧ ಗಾಳಿಯೂ ಇಲ್ಲದ ಅಶಿಕ್ಷಿತ ಮಹಿಳಾವರ್ಗವನ್ನು ಹೆಚ್ಚು ಕಾಣಬಹುದು. ಜಾತಿ, ಧರ್ಮ, ಸಂಪ್ರದಾಯ, ಆಚರಣೆ, ಕುಟುಂಬ, ಸಂಸಾರ ಈ ಚೌಕಟ್ಟಿನೊಳಗಿನಿಂದ ಬಿಡಿಸಿಕೊಂಡು ಶಿಕ್ಷಣ ಪಡೆಯಲು ಮುಂದಾಗುವವರ ಚಿತ್ರಣ ಇಲ್ಲವೆನ್ನಬಹುದು. ಆದರೆ ಕೆಲವೊಂದು ಪಾತ್ರಗಳಲ್ಲಿ ಶಿಕ್ಷಣ ಪಡೆಯಬೇಕೆಂಬ ಎಚ್ಚರಿಕೆ ಇದೆಯಾದರೂ ಅದಕ್ಕೆ ಅನುಕೂಲವಾದ ವಾತಾವರಣವಿಲ್ಲದಿರುವುದು ಸ್ಪಷ್ಟವಾಗುತ್ತದೆ. 'ಓ ಜಗತ್ತೇ' ಕಥೆಯಲ್ಲಿನ ಮಾಧು ಹಣ ಲೆಕ್ಕ ಮಾಡಲಾಗದ ತನ್ನ ಅನಕ್ಷರತೆಯ ಕುರಿತು 'ನಾನು ವಿದ್ಯೆ ಇಲ್ಲದೆ ಕೆಟ್ಟೆ ಅಮ್ಮಾ, ವಿದ್ಯೆ ಇದ್ದಿದ್ದರೆ ನನ್ನನ್ನು ಹಿಡಿಯುವವರಿರಲಿಲ್ಲ.' ಎನ್ನುವಳು. 'ಅಸ್ಪೃಶ್ಯರು' ಕಾದಂಬರಿಯಲ್ಲಿ ಕೆಳಜಾತಿಯವರು ಶಿಕ್ಷಣ, ಇಂಗ್ಲೀಷ್ ಕಲಿಯಬಾರದು ಎಂದು ಪಾರ್ತಕ್ಕ ಮತ್ತು ಗೌರಕ್ಕ ವ್ಯಂಗ್ಯವಾಡುವ ಚಿತ್ರಣದ ಜೊತೆಗೆ ಇದೇ ಕಾದಂಬರಿಯ ಕೂಸಾಳ ತಾಯಿ ತಾವು ವಿದ್ಯೆ ಪಡೆಯದೇ ಇರುವುದು ದೇವರ ನಿಯಮ ಹಾಗಾಗಿ ನಾವು ವಿದ್ಯೆಗೆ ಅರ್ಹರಲ್ಲ ಎಂದು ಜಾತಿಯ ಕಾರಣದಿಂದ ಕೀಳರಿಮೆ ಬೆಳೆಸಿಕೊಂಡು ಶಿಕ್ಷಣದಿಂದ ವಂಚಿತರಾಗುವುದನ್ನು ನೋಡಬಹುದು.

ವೈದೇಹಿಯವರ ಕಥಾಸಾಹಿತ್ಯದಲ್ಲಿ ಜಾತಿಯ ಕುರಿತ ಚರ್ಚೆಗಳು ಅಲ್ಲಲ್ಲಿ ಕಾಣಸಿಗುತ್ತವೆ. 'ಅಸ್ಪೃಶ್ಯರು' ಕಾದಂಬರಿಯ ಪಾರ್ತಕ್ಕ ಮತ್ತು ಗೌರಕ್ಕ ಜಾತಿಯ ಆಚರಣೆಯನ್ನು ಕಟ್ಟುನಿಟ್ಟಾಗಿ ಪಾಲಿಸುವವರು. ಕೆಳಜಾತಿಯವರನ್ನು ಕೀಳೆಂದು ಭಾವಿಸಿದವರು. ಮೇಲುಜಾತಿಯವರೊಡನೆ ಸರಿಸಮಾನ ಸ್ಥಾನ ಪಡೆಯುವಲ್ಲಿ ಕೆಳಜಾತಿಯವರು ಅರ್ಹರಲ್ಲ ಎಂದು ಕೂಸಾಳ ತಮ್ಮ ಇಂಗ್ಲೀಷ್ ಕಲಿಯುವುದನ್ನು ವ್ಯಂಗ್ಯವಾಡುವರು. ತಮ್ಮ ಮನೆಯ ಹೆಣ್ಣುಮಗಳಿಗೆ ಹೆರಿಗೆ ಮಾಡಿಸಲು ಬಂದ ಮಿಡ್‌ಬಾಯಿ ಮೈಲಿಗೆಯವಳೆಂದು ಮುಟ್ಟಲು ನಿರಾಕರಿಸುತ್ತಾರೆ. ಆದರೆ ಈ ಕಾದಂಬರಿಯ ಕೆಳಜಾತಿಯ ಚಂದು ಜಾತಿಯ ಆಚರಣೆಯನ್ನು ಪ್ರಶ್ನೆ ಮಾಡುತ್ತಾಳೆ. ಕತ್ತರಿಸಿದ ಹಲಸಿನ ಹಣ್ಣನ್ನು ಮುಟ್ಟಬೇಡ

ಎಂದಾಗ 'ಕತ್ತರಿಸಲಿಕ್ಕೆ ಅಡ್ಡಿಯಿಲ್ಲ, ಮುಟ್ಟಲಿಕ್ಕೆ ಅಡ್ಡ ಬಂತಾ' ಎನ್ನುವಳು. ಈ ಬಗೆಯಾಗಿ ಜಾತಿಯ ಆಚರಣೆಯಲ್ಲಿ ಹುರುಳಿಲ್ಲ ಎಂಬುದನ್ನು ವೈದೇಹಿಯವರು ತಮ್ಮ ಸಾಹಿತ್ಯದಲ್ಲಿ ಹಲವು ಆಯಾಮಗಳ ಮೂಲಕ ಮನಗಾಣಿಸಿದ್ದಾರೆ.

ವೈದೇಹಿಯವರ ಕಥನಕ್ರಮವನ್ನು ಕ್ರೋಢಿಕರಿಸಿ ಹೇಳುವುದಾದರೆ ಸ್ತ್ರೀಸಂವೇದನೆ ಹಾಗೂ ಸ್ತ್ರೀವಿಶಿಷ್ಟ ಗಾಢಪ್ರಜ್ಞೆಯಲ್ಲಿ ತಮ್ಮ ಬರಹವನ್ನು ಆರಂಭಿಸಿದ ವೈದೇಹಿಯವರು ಹೆಣ್ಣನ್ನು ಕುರಿತು ಇರುವ ಸಾಂಪ್ರದಾಯಿಕ ನೋಟವನ್ನು ಬದಲಾಯಿಸಿ, ಕುಟುಂಬದಾಚೆಗೂ ಆಕೆಗೊಂದು ಬದುಕಿನ ವಿಸ್ತಾರತೆಯಿದೆ ಎಂಬುದನ್ನು ಪ್ರಸ್ತುತಪಡಿಸುತ್ತಾರೆ. ಇವರ ಬಹುತೇಕ ಕಥೆಗಳಲ್ಲಿನ ಪಾತ್ರಗಳು ಪರಂಪರಾಗತ ಹಿಂದೂ ವೈವಾಹಿಕ ಚೌಕಟ್ಟಿನಲ್ಲಿ ಬಂಧಿಯಾದ ಸ್ತ್ರೀಯ ಕೌಟುಂಬಿಕ ತಾಕಲಾಟಗಳನ್ನು ಬಿಂಬಿಸುತ್ತವೆ. ಮಹಿಳೆಯರು ಸಾಮಾಜಿಕ ಮತ್ತು ಕೌಟುಂಬಿಕ ಜಗತ್ತಿನಲ್ಲಿ ಅಸ್ಮಿತತೆ ಮತ್ತು ಅಸ್ತಿತ್ವದ ಪ್ರಶ್ನೆ ಎದುರಿಸುತ್ತಿರುವುದನ್ನು ಮನದಟ್ಟು ಮಾಡಿಸುತ್ತವೆ. ಈ ರೀತಿಯಾಗಿ ಕತೆಗಾರ್ತಿಯಾದ ವೈದೇಹಿಯವರು ನಾಗರೀಕ ಸಮಾಜದಲ್ಲಿ ಹೆಣ್ಣನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿರುವ ಕುರಿತು ತಮ್ಮ ಕಥನಗಳ ಮೂಲಕ ಅಸಮಾಧಾನ ಹೊರಹಾಕಿರುವುದು ವೇದ್ಯವಾಗುತ್ತದೆ. ಅದರೊಂದಿಗೆ ಹೆಣ್ಣಿಗೂ ಒಂದು ಮನಸ್ಸಿದೆ, ಅವಳದೇ ಆದ ಭಾವನಾಪ್ರಪಂಚವಿದೆ ಎಂಬ ಹೆಣ್ಣಿನ ಅಂತರಂಗದ ಒಳತೋಟಿಗಳನ್ನು ಕಥನದಲ್ಲಿ ಹಲವು ಬಗೆಯ ಕಾಣ್ಕೆಗಳಲ್ಲಿ ಮುಂದಿಡುವುದನ್ನು ನೋಡಬಹುದು.

## ಗ್ರಂಥ ಋಣ


೧. ತ್ರಿವೇಣಿ., ಕೀಲುಗೊಂಬೆ, ೨೦೨೦, ಭಾರತೀಯ ಪ್ರಕಾಶನ, ಬೆಂಗಳೂರು

೨. ತ್ರಿವೇಣಿ .,ತಾವರೆಯಕೊಳ.,೨೦೧೯., ಭಾರತೀಯ ಪ್ರಕಾಶನ, ಬೆಂಗಳೂರು

೩. ಸಿ ವೀರಣ್ಣ (ಸಂ)., ವೈದೇಹಿಯವರ ಆಯ್ದು ಕಥೆಗಳು, ೨೦೦೧ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೪. ವೈದೇಹಿ 'ಅಮ್ಮಚ್ಚಿ ಎಂಬ ನೆನಪು' ೨೦೧೬ (೧೯೭೯) ಅಕ್ಷರ ಪ್ರಕಾಶನ ಹೆಗ್ಗೋಡು

೫. ಸಿ ಎನ್ ರಾಮಚಂದ್ರನ್., ತ್ರಿವೇಣಿ., ಮುದ್ರಣ :೧೯೯೯., ಪ್ರಸಾರಾಂಗ., ಬೆಂಗಳೂರು ವಿಶ್ವವಿದ್ಯಾಲಯ